ಸೆಲೆಬ್ರಿಟಿ

■ ಹನಿ

## ಬ್ರಾನ್ಸನ್‌ನ ಕನಸು

ಕನಸುಗಳಿಗೆ ರೆಕ್ಕೆಗಳಿವೆ. ಅದು ಎಲ್ಲೆಂದರಲ್ಲಿ ಹಾರಾಡಬಹುದು. ಇಂಗ್ಲೆಂಡಿನ 63ರ ಹರೆಯದ ಉದ್ಯಮಿ ರಿಚರ್ಡ್ ಬ್ರಾನ್ಸನ್ ಅಂತೂ ತನ್ನ ಕನಸಿನ ರೆಕ್ಕೆಗಳನ್ನು ಯಾವತ್ತೂ ಮಡಚಿಟ್ಟುಕೊಂಡವನಲ್ಲ. ವರ್ಜಿನ್ ಅಟ್ಲಾಂಟಿಕ್ ವಿಮಾನ ಕಂಪೆನಿಯ ಒಡೆಯ ಬ್ರಾನ್ಸನ್, ಅಂತರಿಕ್ಷ ಪ್ರವಾಸೋದ್ಯಮದ ಕನಸಿನಲ್ಲೀಗ ಪೂರ್ತಿ ಮಗ್ನ. ಆತನ ಸಂಸ್ಥೆಯು 2014ರ ಕೊನೆಯಲ್ಲಿ ಹಮ್ಮಿಕೊಂಡಿರುವ ಅಂತರಿಕ್ಷ ಪ್ರವಾಸ ಟ್ರಿಪ್‌ಗೆ ಈಗಾಗಲೆ ಜಗತ್ತಿನಾದ್ಯಂತ 330 ಜನರು ಬುಕಿಂಗ್ ಮಾಡಿದ್ದು, 45 ದಶಲಕ್ಷ ಡಾಲರ್ ಮುಂಗಡ ಪಾವತಿಯನ್ನೂ ಮಾಡಿದ್ದಾರೆ. ಮೊದಲ ಟ್ರಿಪ್‌ನಲ್ಲಿ ಬ್ರಾನ್ಸನ್ ಕೂಡಾ ತನ್ನ ಇಬ್ಬರು ಮಕ್ಕಳ ಜತೆಗೆ ಪ್ರಯಾಣ ಬೆಳೆಸಲಿದ್ದಾನೆ.

ಚಿಕ್ಕಂದಿನಲ್ಲಿ ಡಿಸ್‌ಲೆಕ್ಸಿಯಾದಿಂದ ಬಳಲುತ್ತಿದ್ದ ಬ್ರಾನ್ಸನ್, 16ರ ಹರೆಯದಲ್ಲಿ ಶಾಲೆಯಿಂದ ಡ್ರಾಪೌಟ್ ಆದವ. ಡಿಸ್‌ಲೆಕ್ಸಿಯಾದಿಂದಾಗಿ ಆತನಿಗೆ ಗ್ರಾಫಿಕ್‌ಗಳನ್ನು ಗ್ರಹಿಸಲು ಕಷ್ಟವಾಗುತ್ತಿತ್ತು. ಯಾವುದೇ ಒಂದು ವಿಷಯದ ಮೇಲೆ ಗಮನ ಕೇಂದ್ರೀಕರಿಸಲು ಆಗುತ್ತಿರಲಿಲ್ಲ. ಈಗ ಆತನ ಉದ್ಯಮ ಸಾಹಸಗಳೂ ಹಾಗೆಯೇ. ಈತನ ಮೊದಲ ಸಾಹಸವೆಂದರೆ 'ಸ್ಟೂಡೆಂಟ್ ಫಾರ್ ಟೀನ್ಸ್' ಎಂಬ ಮಕ್ಕಳ ಮ್ಯಾಗಸಿನ್ ತಂದದ್ದು. ಮೊದಲ ಎಡಿಷನ್‌ಗೇ 8000 ಡಾಲರ್‌ಗಳ ಜಾಹೀರಾತು ಸಿಕ್ಕಿತ್ತಂತೆ! 72ರಲ್ಲಿ ವರ್ಜಿನ್ ರೆಕಾರ್ಡ್ಸ್ ಎಂಬ ಸಂಗೀತದ ಕಂಪೆನಿ ಹುಟ್ಟುಹಾಕಿದ. ಅದರ ಯಶಸ್ಸಿನ ಬೆನ್ನಲ್ಲೇ ವರ್ಜಿನ್ ಅಟ್ಲಾಂಟಿಕ್ ಏರ್‌ಲೈನ್ಸ್ ಶುರು ಮಾಡಿದ. 92ರಲ್ಲಿ ಸಂಗೀತ ಕಂಪೆನಿಯನ್ನು ಮಾರಿದರೂ, ಬಳಿಕ ವರ್ಜಿನ್ ರೇಡಿಯೊ ಮತ್ತು ವಿ2 ಕಂಪೆನಿ ಸ್ಥಾಪಿಸಿ, ವಿಶ್ವಖ್ಯಾತಿಯ ಗಾಯಕರ ಜತೆ ರೆಕಾರ್ಡಿಂಗ್ ಒಪ್ಪಂದ ಮಾಡಿಕೊಂಡ. ಅಲ್ಲಿಂದ ಮುಟ್ಟಿದ್ದೆಲ್ಲ ಚಿನ್ನ. 87ರಲ್ಲಿ ಬಿಸಿಗಾಳಿಯ ಬಲೂನ್‌ನಲ್ಲಿ ಕುಳಿತು ಅಟ್ಲಾಂಟಿಕ್ ಸಮುದ್ರ ದಾಟಿದ ಸಾಹಸಿಯೀತ. 'ಬಿಸಿ ಗಾಳಿಯ ಬಲೂನಿನಲ್ಲಿ ಭೂಮಿಗೆ ಒಂದು ರೌಂಡ್ ಹೋಗಿಬರಬೇಕು' ಎನ್ನುವುದು ಈತನ ಮುಂದಿನ ಬಯಕೆಯಂತೆ! 2014ರ ಕೊನೆಯಲ್ಲಿ ಅಂತರಿಕ್ಷ ಪ್ರವಾಸ ಟ್ರಿಪ್ ಆರಂಭವಾದ ಬಳಿಕ, ಅಂತರಿಕ್ಷದಲ್ಲಿ ಮನೆಗಳನ್ನು ಕಟ್ಟುವ ಯೋಜನೆಯೂ ಇದೆಯಂತೆ. ಕನಸುಗಳಿಗೆ ಮಿತಿಯಿಲ್ಲ ಎನ್ನುವುದು ನಿಜವಲ್ಲವೆ?






## ಜೀವಮಾನದ ಸಾಧನೆ

ಕಪಿಲ್‌ದೇವ್ ಎಂಬ ಸಜ್ಜನ ಕ್ರಿಕೆಟಿಗನಿಗೆ ಕೊನೆಗೂ ಬಿಸಿಸಿಐ 2013ನೇ ಸಾಲಿನ ಜೀವಮಾನದ ಸಾಧನೆ ಪ್ರಶಸ್ತಿಯನ್ನು ಪ್ರಕಟಿಸಿದೆ. ಫಲಕ ಮತ್ತು 25 ಲಕ್ಷ ರೂಪಾಯಿ ನಗದು ಹೊಂದಿರುವ ಈ ಪ್ರಶಸ್ತಿಯನ್ನು ಭಾರತದ ಮೊದಲ ಟೆಸ್ಟ್ ನಾಯಕ ಸಿ.ಕೆ.ನಾಯ್ಡು ಹೆಸರಲ್ಲಿ ಬಿಸಿಸಿಐ ನೀಡುತ್ತಿದೆ. 'ಹೆಮ್ಮೆಯಾಗಿದೆ. ನನಗೆ ವಯಸ್ಸಾಯಿತೆ..? ನಾನಿನ್ನೂ 55 ಕಣ್ರೀ..' ಎನ್ನುವುದು ಸುದ್ದಿ ತಿಳಿದಾಕ್ಷಣ ಕಪಿಲ್‌ದೇವ್ ನೀಡಿದ ಪ್ರತಿಕ್ರಿಯೆ!

78ರಲ್ಲಿ ಟೆಸ್ಟ್‌ಗೆ ಕಾಲಿಟ್ಟ ಕಪಿಲ್‌ದೇವ್ ನಿಖಂಜ್ 80ರ ದಶಕದ ಉದ್ದಕ್ಕೂ ಭಾರತೀಯರ ಹೀರೊ. ಅದರಲ್ಲೂ 83ರಲ್ಲಿ ಈತನ ನಾಯಕತ್ವದಲ್ಲಿ ಭಾರತ ಮೊದಲ ಬಾರಿಗೆ ವಿಶ್ವಕಪ್ ಗೆದ್ದ ಬಳಿಕ ಅಭಿಮಾನಿಗಳ ಸಂಭ್ರಮಕ್ಕೆ ಮಿತಿಯೇ ಇಲ್ಲ. ಟೆಸ್ಟ್‌ನಲ್ಲಿ 5000 ರನ್ ಮತ್ತು 400 ವಿಕೆಟ್‌ಗಳ ಡಬಲ್ ಸಾಧಿಸಿದ ಮೊದಲ ಕ್ರಿಕೆಟಿಗ ಕಪಿಲ್. 87ರಲ್ಲೂ ವಿಶ್ವಕಪ್ ತಂಡದ ನಾಯಕನಾಗಿದ್ದರೂ ಸೆಮಿಫೈನಲ್‌ನಿಂದ ತಂಡ ಮುಂದಕ್ಕೆ ಹೋಗಲಿಲ್ಲ. ಆ ಕಾಲದಲ್ಲೇ ಅತ್ಯಂತ ಹೆಚ್ಚು ಜಾಹೀರಾತುಗಳಲ್ಲಿ ಕಾಣಿಸಿಕೊಂಡಿರುವ ಕಪಿಲ್, ಕ್ರಿಕೆಟ್ ನಿವೃತ್ತಿಯ ಬಳಿಕ ಗಾಲ್ಫ್ ಆಡುತ್ತಿರುವುದು ವಿಶೇಷ.

2007ರಲ್ಲಿ ಇಂಡಿಯನ್ ಕ್ರಿಕೆಟ್ ಲೀಗ್ ಜತೆ ಸೇರಿಕೊಂಡದ್ದರಿಂದ ಕಪಿಲ್ ಜತೆಗೆ ಬಿಸಿಸಿಐ ಮುನಿಸಿ–ಕೊಂಡಿತ್ತು. ಆದರೆ ಕಳೆದ ವರ್ಷ ಐಸಿಎಲ್ ನಿಂದ ಕಪಿಲ್ ಹೊರ ಬಂದ ಬಳಿಕ, ಬಿಸಿಸಿಐ 1.5 ಕೋಟಿ ರೂಪಾಯಿಗಳ ಹಮ್ಮಿಣಿ ಅರ್ಪಿಸಿ ಗೌರವಿಸಿತ್ತು. ಈಗ ಜೀವಮಾನದ ಸಾಧನೆ ಪ್ರಶಸ್ತಿಯ ಸರದಿ. ಹೋಟೆಲ್, ಸ್ಟೇಡಿಯಂಗಳಿಗೆ ಫ್ಲಡ್‌ಲೈಟ್ ಒದಗಿಸುವ ಕಂಪೆನಿ– ಹೀಗೆ ಹಲವು ಉದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಕಪಿಲ್, ಅವಕಾಶ ವಂಚಿತ ಮಕ್ಕಳ ಶಿಕ್ಷಣಕ್ಕಾಗಿಯೂ ದುಡಿಯುತ್ತಿದ್ದಾರೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65